# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 342 |
| ಸದಸ್ಯರ ಹೆಸರು | : | ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 11.12.2024 |
| ಉತ್ತರಿಸುವ ಸಚಿವರು | : | ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಯಚೂರು ಜಿಲ್ಲೆಯ ಹಟ್ಟಿಪಟ್ಟಣ ಗ್ರಾಮ ಅತೀ ಹೆಚ್ಚು ಜನ ಸಂಖ್ಯೆ ಹೊಂದಿದ್ದು, ಇಲ್ಲಿನ ಗ್ರಾಮಪಂಚಾಯಿತಿಗಳಿಗೆ ಮತ್ತು ರೈತರ ಹೈನುಗಾರಿಕೆ ಅಭಿವೃದ್ದಿಯಾಗದೆ ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹಟ್ಟಿ ಪಟ್ಟಣದಲ್ಲಿ 20ನೇ ಜಾನುವಾರು ಗಣತಿಯ ಪ್ರಕಾರ ದನ-774, ಎಮ್ಮೆ-270, ಕುರಿ-580, ಮೇಕೆ-2217, ಹಂದಿ-1445, ನಾಯಿ-175, ಕೋಳಿ-1200. ಹಟ್ಟಿ ಪಟ್ಟಣವು ಗೆಜ್ಜಲಗಟ್ಟ ಪಶು ಚಿಕಿತ್ಸಾಲಯಕ್ಕೆ ಬರುತ್ತಿದ್ದು ಸುತ್ತಮುತ್ತಲಿನ ಒಟ್ಟು ಗ್ರಾಮಗಳಲ್ಲಿ ಪಶು ಚಿಕಿತ್ಸಾಲಯದಿಂದ ಪ್ರಸಕ್ತ ಸಾಲಿನಲ್ಲಿ ಒಟ್ಟು ಕೃತಕ ಗರ್ಭಧಾರಣೆ-253, ಪ್ರಸಕ್ತ ಸಾಲಿನಲ್ಲಿ ಒಟ್ಟು ಗರ್ಭತಪಾಸಣೆ - 171, ಕಾಲುಬಾಯಿ ಲಸಿಕೆ ಒಟ್ಟು-6953, ಕರಳು ಬೇನೆ ಲಸಿಕೆ ಒಟ್ಟು-5376, ಕಂದು ರೋಗದ ಲಸಿಕೆ ಒಟ್ಟು-140, ಚರ್ಮಗಂಟು ರೋಗ ಲಸಿಕೆ ಒಟ್ಟು-2905, ರೇಬೀಸ್ ಲಸಿಕೆ ಒಟ್ಟು-200, ಪಿ.ಪಿ.ಆರ್ ಲಸಿಕೆ ಒಟ್ಟು-5383 ಹಾಕಲಾಗಿದೆ. ಇಲಾಖಾ ವತಿಯಿಂದ ಗ್ರಾಮಗಳಲ್ಲಿ ಕಾಲಕಾಲಕ್ಕೆ ಗ್ರಾಮಸಂದರ್ಶನ ಹಾಗೂ ಗ್ರಾಮಸಭೆ ಮುಖಾಂತರ ಹಟ್ಟಿ ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ಪಶು ಸಂಗೋಪನೆ ಹಾಗೂ ಹೈನುಗಾರಿಕೆ ಸಂಬಂಧ ಪಶು ಚಿಕಿತ್ಸಾಲಯದ ಮುಖಾಂತರ ಹೈನುಗಾರಿಕೆ ಪ್ರೋತ್ಸಾಹ ನೀಡಲಾಗುತ್ತದೆ. ಪಶು ವೈದ್ಯ ಕೇಂದ್ರದಲ್ಲಿ ಬರಡು ರಾಸು ಚಿಕಿತ್ಸಾ ಶಿಬಿರ, ಲಸಿಕಾ ಕಾರ್ಯಕ್ರಮ ಮತ್ತು ಜಂತು ನಾಶಕ ಔಷಧಿ ಸರಬರಾಜು ಅದಲ್ಲದೆ ವೈಜ್ಞಾನಿಕ ಶಿಬಿರಗಳನ್ನು ಹಮ್ಮಿಕೊಂಡಿದ್ದು, ಪ್ರಸ್ತುತ ಸಾಲಿನಲ್ಲಿಯೂ ಸಹ ಹೈನುಗಾರಿಕೆ ಉತ್ತೇಜನ ನೀಡುವ ಜಾನುವಾರು ಆರೋಗ್ಯ ಸಂರಕ್ಷಣೆ ಕಾರ್ಯಕ್ರಮಗಳನ್ನು ಮತ್ತು ವಿಸ್ತರಣಾ ಚಟುವಟಿಕೆಗಳಾದ ಬರಡು ರಾಸು ಚಿಕಿತ್ಸಾ ಶಿಬಿರ ಮತ್ತು ವೈಜ್ಞಾನಿಕ ಶಿಬಿರಗಳನ್ನು ಹಮ್ಮಿಕೊಳ್ಳಲಾಗಿದೆ. ಇದರಿಂದಾಗಿ ರೈತರಿಗೆ ಹೈನುಗಾರಿಕೆ ಮಾಹಿತಿ ಕೊರತೆ ಕಂಡುಬಂದಿರುವುದಿಲ್ಲ. |

...2

| | | |
|---|---|---|
| ಆ | ಬಂದಿದ್ದಲ್ಲಿ ಈ ಗ್ರಾಮ ಅಭಿವೃದ್ಧಿಯಾಗಲು ಸರ್ಕಾರ ಕೈಗೊಂಡ ಕ್ರಮಗಳೇನು;<br>(ವಿವರ ನೀಡುವುದು) | ಸದರಿ ಗ್ರಾಮದಲ್ಲಿನ ಜಾನುವಾರುಗಳಿಗೆ ಗೆಜ್ಜಲಗಟ್ಟ ಪಶು ಚಿಕಿತ್ಸಾಲಯದಿಂದ ಚಿಕಿತ್ಸೆ ನೀಡಲಾಗುತ್ತಿದೆ. 1962 ಸಂಚಾರಿ ಪಶು ಘಟಕದ ಮೂಲಕ ಚಿಕಿತ್ಸೆ ನೀಡಲಾಗುತ್ತಿದೆ. ಅಲ್ಲದೆ ನೂತನ ಪಶು ಚಿಕಿತ್ಸಾಲಯ ಸ್ಥಾಪನೆ ಮಾಡುವ ಕುರಿತು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. |
| ಇ | ಹಟ್ಟಿಪಟ್ಟಣದಲ್ಲಿ ಪಶು ಆಸ್ಪತ್ರೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಯಾವಾಗ ಪಶು ಆಸ್ಪತ್ರೆಯ ಕಟ್ಟಡ ಪ್ರಾರಂಭ ಮಾಡುವುದು?<br>(ವಿವರ ನೀಡುವುದು) | ಹೌದು, ಬಂದಿದೆ.<br>2024-25ನೇ ಸಾಲಿನಲ್ಲಿ ನೂತನ ಪಶುಚಿಕಿತ್ಸಾಲಯಗಳನ್ನು ತೆರೆಯುವ ಸಂಬಂಧ ಹಟ್ಟಿಪಟ್ಟಣದ ಪ್ರಸ್ತಾವನೆಯು ಸೇರಿದಂತೆ ಒಟ್ಟು 601 ಪ್ರಸ್ತಾವನೆಗಳು ಸರ್ಕಾರದ ಪರಿಶೀಲನೆಯಲ್ಲಿದೆ. |

ಇ-ಪಸಂಮೀ 299 ಸಲೆವಿ 2024

(ಕೆ. ವೆಂಕಟೇಶ್)
ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು